**ಕರ್ನಾಟಕ ರಾಜ್ಯ ನೌಕರರ ಸಾಮೂಹಿಕ ವಿಮಾ ಯೋಜನೆಯ ಸಂಕ್ಷಿಪ್ತ ನೋಟ:**

- ಈ ಯೋಜನೆಯನ್ನು ಸರ್ಕಾರದ ಅಧಿಕೃತ ಜ್ಞಾಪಕ ಸಂಖ್ಯೆ ಎಫ್‌ಡಿ 80 ಎಸ್‌ಆರ್‌ಪಿ(ಸಿಎಸ್‌ಸಿ)81, ಬೆಂಗಳೂರು, ದಿನಾಂಕ 21-12-1981 ರ ಪ್ರಕಾರ ದಿನಾಂಕ 01-01-1982 ರಿಂದ ಜಾರಿಗೆ ಬರುವಂತೆ ಪ್ರಾರಂಭಿಸಲಾಗಿದೆ.
- ಈ ಯೋಜನೆಯು ಸಂಪೂರ್ಣವಾಗಿ ಸ್ವಯಂ ವಂತಿಕೆ ಹಾಗೂ ಸ್ವಯಂ ಹಣಕಾಸಿನ ವ್ಯವಸ್ಥೆ ಹೊಂದಿದೆ.
- ವಂತಿಗೆಯು ಶಾಸನಬದ್ಧವಾಗಿರುವುದರಿಂದ ನಿಯಮಿತ ವೇತನ ಬಿಲ್‌ಗಳಲ್ಲಿ ವಂತಿಕೆ ಹಣ ಕಡಿತಗೊಳಿಸಲಾಗುತ್ತದೆ.
- ಈ ಯೋಜನೆಯು ಸಂಪೂರ್ಣವಾಗಿ ರಾಜ್ಯ ಸರ್ಕಾರಿ ನೌಕರರಿಗೆ ಮಾತ್ರ ಅನ್ವಯಿಸುತ್ತದೆ (ನಿಗಮ, ಮಂಡಳಿ, ಕಾರ್ಪೋರೇಷನ್, ಪುರಸಭೆ ನೌಕರರು ಹಾಗೂ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ನೌಕರರು ಹೊರತುಪಡಿಸಿದೆ) ಹಾಗೂ ಯಾವುದೇ ವೈಯಕ್ತಿಕ ಲೆಕ್ಕಪತ್ರ ವ್ಯವಸ್ಥೆ ಇಲ್ಲ.
- ವಂತಿಗೆಯನ್ನುಯಾವಾಗಲೂ ಮುಂಗಡವಾಗಿ ಪಾವತಿಮಾಡಬೇಕು.
- ಈ ಯೋಜನೆಯಡಿ 2 ಬಗೆ ನಿಧಿಗಳಿದ್ದು, ಅವುಗಳು ವಿಮಾ ನಿಧಿ ಮತ್ತು ಉಳಿತಾಯ ನಿಧಿ ಎಂಬುದಾಗಿದೆ.
- ಈ ಯೋಜನೆಯ ವಂತಿಕೆ ರೂ.120/- ರಲ್ಲಿ, ರೂ.30/- ವಿಮಾ ನಿಧಿಗೆ ಹಾಗೂ ರೂ.90/- ಉಳಿತಾಯ ನಿಧಿಗೆ ಜಮೆ ಮಾಡಬೇಕಾಗಿದೆ.
- ಸದಸ್ಯರು ಸರ್ಕಾರಿ ಸೇವೆಯಿಂದ ನಿವೃತ್ತರಾದರೆ, ಉಳಿತಾಯ ನಿಧಿಯಲ್ಲಿ ಬಾಕಿ ಇರುವ ಮೊತ್ತವನ್ನು ಮಾತ್ರ ಬಡ್ಡಿಯೊಂದಿಗೆ ಸರ್ಕಾರವು ಪ್ರಕಟಿಸುವ ಕೋಷ್ಟಕದ ಆಧಾರದ ಮೇರೆಗೆ ಪಾವತಿಸಲಾಗುತ್ತದೆ.
- ಜನವರಿ ಮಾಹೆಯನ್ನು ಹೊರತುಪಡಿಸಿ ಬೇರೆ ಯಾವುದೇ ದಿನದಂದು ನೇಮಕಗೊಳ್ಳುವ ವ್ಯಕ್ತಿಯು ವಿಮಾ ನಿಧಿಗೆ ಮಾತ್ರ ವಂತಿಕೆದಾರರಾಗುತ್ತಾರೆ ಹಾಗೂ ಮುಂದಿನ ವರ್ಷದ ಜನವರಿ 1 ರಿಂದ ನಿಯಮಿತ ಸದಸ್ಯರಾಗುತ್ತಾರೆ.
- ಈ ಯೋಜನೆಯಲ್ಲಿ ಸಾಲ ಮತ್ತು ಮುಂಗಡಗಳಿಗೆ ಯಾವುದೇ ಅವಕಾಶವಿರುವುದಿಲ್ಲ.
- ಈ ಯೋಜನೆಯಡಿ ವಂತಿಕೆದಾರರನ್ನು 4 ಗುಂಪುಗಳಾಗಿ ವರ್ಗೀಕರಿಸಲಾಗಿದೆ. ಗ್ರೂಪ್ 'ಎ', 'ಬಿ', 'ಸಿ' ಮತ್ತು 'ಡಿ'.
- ಈ ಯೋಜನೆಯ ವಂತಿಕೆದಾರರು ಈ ಕೆಳಗಿನ ಗ್ರೂಪ್‌ಗಳಿಗನುಸಾರವಾಗಿ ವಂತಿಕೆಗಳನ್ನು ಸಲ್ಲಿಸತಕ್ಕದ್ದು.

| ಕ್ರ. ಸಂ. | ಇಂದ | ಗೆ | ಗ್ರೂಪ್ (ರೂ.ಗಳಲ್ಲಿ) | | | |
|---|---|---|---|---|---|---|
| | | | 'ಡಿ' (ಯೂನಿಟ್-1) | 'ಸಿ' (ಯೂನಿಟ್-2) | 'ಬಿ' (ಯೂನಿಟ್-3) | 'ಎ' (ಯೂನಿಟ್-4) |
| 1 | 01-01-1982 | 31-12-1986 | 10 | 20 | 30 | 40 |
| 2 | 01-01-1987 | 31-12-1999 | 20 | 40 | 60 | 80 |
| 3 | 01-01-2000 | 31-12-2018 | 60 | 120 | 180 | 240 |
| 4 | 01-01-2019 onwards | | 120 | 240 | 360 | 480 |

- ಈ ಯೋಜನೆಯ ಸದಸ್ಯರು ಉನ್ನತ ಹುದ್ದೆಗಳಿಗೆ ಬಡ್ತಿ ಪಡೆದ ನಂತರ, ಮುಂದಿನ ವಾರ್ಷಿಕೋತ್ಸವದ ದಿನಾಂಕದಿಂದ ಅಂದರೆ ಜನವರಿ ಮಾಹೆಯಿಂದ ಗುಂಪುಗಳಿಗನುಸಾರ ವಂತಿಕೆಯನ್ನು ಹೆಚ್ಚಿಸಬೇಕು.
- ಬಡ್ಡಿದರದ ಕೋಷ್ಟಕ : (ತ್ರೈಮಾಸಿಕ ಅವಧಿಯ ಬಡ್ಡಿಯೊಂದಿಗೆ)

| ಕ್ರ.ಸಂ. | ಇಂದ | ಗೆ | ವಿಮಾ ನಿಧಿ | ಉಳಿತಾಯ ನಿಧಿ |
|---|---|---|---|---|
| 1 | 01-01-1982 | 31-12-1984 | 5.5% | 10% |
| 2 | 01-01-1985 | 31-12-1987 | 5.5% | 11% |
| 3 | 01-01-1988 | 31-12-1998 | 5.5% | 12% |
| 4 | 01-01-1999 | 28-02-2001 | 4.5% | 12% |
| 5 | 01-03-2001 | 31-12-2003 | 3.5% | 12% |
| 6 | 01-01-2004 | 31-12-2006 | 3.5% | 9% |
| 7 | 01-01-2007 onwards | | 3.5% | 8% |

ಲೆಕ್ಕಶೀರ್ಷಿಕೆ :

8011-00-107-0-01 ವಿಮಾ ನಿಧಿ (ಸಂದಾಯ ಮತ್ತು ಪಾವತಿ)

8011-00-107-0-02 ಉಳಿತಾಯ ನಿಧಿ (ಸಂದಾಯ ಮತ್ತು ಪಾವತಿ)

2049-03-108-03-00-240 ಬಡ್ಡಿ ಪಾವತಿಸಬೇಕಾದ ಲೆಕ್ಕಗಳು

ಕರ್ನಾಟಕ ರಾಜ್ಯ ನೌಕರರ ಕುಟುಂಬ ಕಲ್ಯಾಣ ನಿಧಿ ಯೋಜನೆ-1975

ಈ ಯೋಜನೆಯು ಕರ್ನಾಟಕ ರಾಜ್ಯದ ಎಲ್ಲಾ ಪುರಸಭೆ / ನಗರಸಭೆ ನೌಕರರು ಮತ್ತು ಸರ್ಕಾರಿ ಅನುದಾನಿತ ಶಾಲೆಗಳ ಸಿಬ್ಬಂದಿಗೆ